**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 348/2023**

ಚಾ.ಸಾ–04, ಪ್ರಾ.ಸಾ–05

| | | |
|---|---|---|
| ಹೆಸರು | : | ಜಯಮ್ಮ |
| ಗಂಡನ ಹೆಸರು | : | ಮಹದೇವನಾಯಕ |
| ವಯಸ್ಸು | : | 50 |
| ವೃತ್ತಿ | : | ಗೃಹಿಣಿ |
| ವಾಸ | : | ಕಂದಹಳ್ಳಿ ಗ್ರಾಮ, ಯಳಂದೂರು ತಾಲ್ಲೂಕು |

**<u>ದಿನಾಂಕ 24.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಕಳೆದ ಎರಡು ವರ್ಷಗಳ ಹಿಂದೆ ನಾನು ಮೈಸೂರಿನಿಂದ ನಮ್ಮ ಗ್ರಾಮಕ್ಕೆ ಖಾಸಗಿ ಬಸ್ಸಿನಲ್ಲಿ ಹೋಗುತ್ತಿರುವಾಗ ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಕುರುಬೂರು ಗ್ರಾಮದ ಹತ್ತಿರ ಆ ಬಸ್ಸು ಮತ್ತು ಕಾರಿನ ನಡುವೆ ಅಪಘಾತವಾಗಿರುತ್ತದೆ. ಆ ಬಸ್‌ನ ಚಾಲಕನ ಅತಿವೇಗ ಚಾಲನೆಯು ಅಪಘಾತಕ್ಕೆ ಕಾರಣವಾಗಿರುತ್ತದೆ.

ಅಪಘಾತದಿಂದ ನನ್ನ ತಲೆಗೆ, ಬಲ ಮಂಡಿಗೆ ಮತ್ತು ಬಲಭುಜಕ್ಕೆ ಪೆಟ್ಟಾಗಿರುತ್ತದೆ. ನನ್ನನ್ನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಆನಂತರ, ನನ್ನನ್ನು ಕೊಳ್ಳೇಗಾಲದ ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಸೇರಿಸಲಾಯಿತು.

ಬಸ್ಸಿನಲ್ಲಿದ್ದ ಸುಮಾರು 20–30 ಜನರಿಗೆ ಪೆಟ್ಟಾಗಿತ್ತು. ಆ ಬಸ್ಸಿನ ಚಾಲಕನನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಅಪಘಾತದಿಂದ ಆ ಬಸ್‌ನ ಮುಂಭಾಗ ಜಖ: ಆಗಿತ್ತು ಮತ್ತು ಆ ಕಾರಿನ ಮುಂದಿನ ಅರ್ಧ ಭಾಗ ಜಖ: ಆಗಿತ್ತು ಎಂದರೆ ನನಗೆ ಪ್ರಜ್ಞೆ ಇರದ ಕಾರಣ ನನಗೆ ಗೊತ್ತಿಲ್ಲ. ಅಪಘಾತದಿಂದ ಆ ಕಾರಿನ ಚಾಲಕ ಸೇರಿ ಅದರಲ್ಲಿ ಪ್ರಯಾಣ ಮಾಡುತ್ತಿದ್ದವರು ಸೇರಿ 10 ಜನರು ಮರಣ ಹೊಂದಿದರು ಎಂದರೆ ಸರಿ.

ಆ ಬಸ್‌ನ ಸಂಖ್ಯೆ ಕೆಎ–55/2061 ಮತ್ತು ಆ ಕಾರಿನ ಸಂಖ್ಯೆ ಕೆ–02/ಎಡಿ–5184 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅಪಘಾತಕ್ಕೆ ಆ ಕಾರಿನ ಚಾಲಕನ ಅತಿವೇಗ ಮತ್ತು ನಿರ್ಲಕ್ಷ್ಯತನ ಚಾಲನೆಯು ಕಾರಣ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಕೆ.ಕೆ.ಎನ್. ವಕೀಲರಿಂದ ಆರೋಪಿತ ಪರ**

ಅಪಘಾತದ ದಿನ ಆ ಬಸ್‌ನ ಮಧ್ಯದ ಭಾಗದಲ್ಲಿ ಬಲಕ್ಕೆ ಇರುವ ಆಸನದಲ್ಲಿ ಕುಳಿತಿದ್ದೆ. ಹಾಗಾಗಿ, ಆ ಬಸ್‌ನ ಮುಂದೆ ನನಗೆ ಕಾಣುತ್ತಿರಲಿಲ್ಲ ಎಂದರೆ ಸರಿ.

ಅಪಘಾತದ ಸ್ಥಳದ ರಸ್ತೆಯಲ್ಲಿ ತಿರುವು ಇದೆ ಎಂದರೆ ಸರಿ. ಹಾಗಾಗಿ ಅಲ್ಲಿ ಬಸ್ ನಿಧಾನವಾಗಿ ಚಲಿಸುತ್ತದೆ ಎಂದರೆ ಸರಿ. ಸದರಿ ಬಸ್ ಕೂಡ ಅಲ್ಲಿ ನಿಧಾನವಾಗಿ ಚಲಿಸಿತ್ತು ಎಂದರೆ ಸರಿ.

ಸದರಿ ಕಾರು ಮೂಗೂರು ಕಡೆಯಿಂದ ಬಂದಿತ್ತು. ಸದರಿ ಕಾರು ವೇಗವಾಗಿ ಬಂದು ಬಸ್ಸಿಗೆ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿ. ಅಪಘಾತಕ್ಕೆ ಕಾರಿನ ಚಾಲಕನ ತಪ್ಪು ಕಾರಣವಾಗಿದ್ದು, ಬಸ್ಸಿನ ಚಾಲಕನ ತಪ್ಪು ಕಾರಣವಾಗಿಲ್ಲ ಎಂದರೆ ಇಬ್ಬರೂ ಕಾರಣವಾಗಿರುತ್ತಾರೆ. ಪೊಲೀಸರಿಗೆ ನಾನು ಘಟನೆಯ ಕುರಿತು ಹೇಳಿಕೆ ನೀಡಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 348/2023**

ಚಾ.ಸಾ–07, ಪ್ರಾ.ಸಾ–06

| | | |
|---|---|---|
| ಹೆಸರು | : | ಪುಟ್ಟನಂಜ |
| ತಂದೆಯ ಹೆಸರು | : | ಲೇಟ್ ನಿಂಗಯ್ಯ |
| ವಯಸ್ಸು | : | 40 |
| ವೃತ್ತಿ | : | ಕೂಲಿಕೆಲಸ |
| ವಾಸ | : | ಗಣಗನೂರುಪುರ ಗ್ರಾಮ,<br>ಚಾಮರಾಜನಗರ ತಾಲ್ಲೂಕು |

**ದಿನಾಂಕ 24.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 29.05.2023 ರಂದು ಮಧ್ಯಾಹ್ನ 1.30 ಗಂಟೆಗೆ ಎಸ್.ಎಂ.ಆರ್. ಖಾಸಗಿ ಬಸ್‌ನ್ನು ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಸೇರಿ ಚಾಮರಾಜನಗರಕ್ಕೆ ಹೋಗಲು ಹತ್ತಿದ್ದು, ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಕುರುಬೂರು ಗ್ರಾಮದ ಹತ್ತಿರ ಆ ಬಸ್ಸು ಮತ್ತು ಎದುರಿಗೆ ಬರುತ್ತಿದ್ದ ಕಾರಿನ ನಡುವೆ ಅಪಘಾತವಾಗಿರುತ್ತದೆ. ಆ ಬಸ್‌ನ ಚಾಲಕನ ಅತಿವೇಗ ಚಾಲನೆಯು ಅಪಘಾತಕ್ಕೆ ಕಾರಣವಾಗಿರುತ್ತದೆ.

ಅಪಘಾತದಿಂದ ನನ್ನ ಮಗನ ಬಲಗಣ್ಣಿನ ಹತ್ತಿರ, ಹೊಟ್ಟೆಗೆ ಮತ್ತು ಬಲಗೈಗೆ ಪೆಟ್ಟಾಗಿರುತ್ತದೆ. ಆತನನ್ನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಆನಂತರ, ಆತನ್ನನ್ನು ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಸೇರಿಸಲಾಯಿತು.

ಬಸ್ಸಿನಲ್ಲಿ ಸುಮಾರು 50 ಜನರಿದ್ದು, ಅವರಲ್ಲಿ ಬಹಳಷ್ಟು ಜನರಿಗೆ ಪೆಟ್ಟಾಗಿತ್ತು. ಆ ಬಸ್ಸಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆತ ಈ ದಿನ ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿತನಾಗಿರುತ್ತಾನೆ.

ಆ ಕಾರಿನಲ್ಲಿದ್ದ ಬಹಳಷ್ಟು ಜನರು ಮರಣ ಹೊಂದಿರುತ್ತಾರೆ. ಆ ಕಾರು ಸಂಪೂರ್ಣವಾಗಿ ಜಖಂ ಆಗಿತ್ತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಆ ಕಾರಿನ ಚಾಲಕನೂ ಕೂಡ ಆ ಕಾರನ್ನು ಅತಿವೇಗ ಮತ್ತು ನಿರ್ಲಕ್ಷ್ಯತನ ಚಾಲನೆ ಮಾಡಿದ್ದ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಕೆ.ಕೆ.ಎನ್. ವಕೀಲರಿಂದ ಆರೋಪಿತನ ಪರ**

ಅಪಘಾತದ ದಿನ ಆ ಬಸ್‌ನ ಚಾಲಕನ ಬಲಭಾಗದ ಹಿಂಬದಿಯ ಎರಡನೇ ಆಸನದಲ್ಲಿ ನಾನು ಮತ್ತು ನನ್ನ ಕುಟುಂಬದವರು ಕುಳಿತಿದ್ದೆವು. ಹಾಗಾಗಿ, ಆ ಬಸ್‌ನ ಮುಂದೆ ನಮಗೆ ಕಾಣುತ್ತಿರಲಿಲ್ಲ ಎಂದರೆ ಸರಿ. ಅಪಘಾತದ ಸ್ಥಳದ ರಸ್ತೆಯಲ್ಲಿ ತಿರುವು ಇದೆ ಎಂದರೆ ಸರಿ. ಹಾಗಾಗಿ ಅಲ್ಲಿ ಬಸ್ ನಿಧಾನವಾಗಿ ಚಲಿಸಿತ್ತು ಎಂದರೆ ಸರಿಯಲ್ಲ. ಆ ಬಸ್ಸು ರಸ್ತೆಯ ಎಡಭಾಗದಲ್ಲಿ ಹೋಗುತ್ತಿತ್ತು ಎಂದರೆ ಸರಿ. ಆ ಕಾರು

ಬಸ್ಸಿನ ಎದುರಿಗೆ ಬಲಭಾಗದಿಂದ ಬರುತ್ತಿತ್ತು ಎಂದರೆ ಸರಿ. ಆ ಕಾರು ಬಸ್ಸಿನ ಬಲಭಾಗಕ್ಕೆ ಬಂದು ಡಿಕ್ಕಿಪಡಿಸಿತ್ತು ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ.

ನಾನು ಬಸ್ಸಿನಿಂದ ಇಳಿದು ಅಪಘಾತ ಹೇಗೆ ಆಯಿತು ಎಂದು ನೋಡಿರುತ್ತೀರಾ ಎಂದರೆ ನನ್ನ ಮಗನಿಗೆ ಪೆಟ್ಟಾಗಿದ್ದರಿಂದ ನಾನು ಆ ಬಗ್ಗೆ ಗಮನಿಸಿಲ್ಲ. ಅಪಘಾತಕ್ಕೆ ಕಾರಿನ ಚಾಲಕನ ತಪ್ಪು ಕಾರಣವಾಗಿದೆ ಎಂದರೆ ಬಸ್ಸಿನ ಚಾಲಕನು ಕೂಡ ವೇಗವಾಗಿ ಬಸ್ಸನ್ನು ಚಾಲನೆ ಮಾಡುತ್ತಿದ್ದ. ಅಪಘಾತದಿಂದ ಪರಿಹಾರ ಪಡೆಯಲು 2ನೇ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**

**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 348/2023**

ಚಾ.ಸಾ–08, ಪ್ರಾ.ಸಾ–07

| | | |
|---|---|---|
| ಹೆಸರು | : | ಪವನ್ ಕೆ ಎನ್. |
| ತಂದೆಯ ಹೆಸರು | : | ನಾಗರಾಜು |
| ವಯಸ್ಸು | : | 22 |
| ವೃತ್ತಿ | : | ವಿದ್ಯಾರ್ಥಿ |
| ವಾಸ | : | ಕನ್ನಹಳ್ಳಿ ಗ್ರಾಮ, ತಿ. ನರಸೀಪುರ ತಾಲ್ಲೂಕು |

**<u>ದಿನಾಂಕ 24.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ದಿನಾಂಕ 29.05.2023 ರಂದು ಮಧ್ಯಾಹ್ನ 1.45 ಗಂಟೆಗೆ ಎಸ್.ಎಂ.ಆರ್. ಖಾಸಗಿ ಬಸ್ ಸಂಖ್ಯೆ ಕೆಎ–55/2061 ನ್ನು ನಾನು ನಮ್ಮ ಊರಿಗೆ ಹೋಗಲು ತಿ. ನರಸೀಪುರದ ಖಾಸಗಿ ಬಸ್ ನಿಲ್ದಾಣದಲ್ಲಿ ಹತ್ತಿದ್ದು, ಮಧ್ಯಾಹ್ನ 2.10 ಗಂಟೆ ಸಮಯದಲ್ಲಿ ಕುರುಬೂರು ಗ್ರಾಮದ ಹತ್ತಿರ ಆ ಬಸ್ಸು ಮತ್ತು ಎದುರಿಗೆ ಬರುತ್ತಿದ್ದ ಕಾರಿನ ನಡುವೆ ಅಪಘಾತವಾಗಿರುತ್ತದೆ. ಆ ಬಸ್‌ನ ಮತ್ತು ಕಾರಿನ ಚಾಲಕರ ಅತಿವೇಗ ಚಾಲನೆಯು ಅಪಘಾತಕ್ಕೆ ಕಾರಣವಾಗಿರುತ್ತದೆ.

ಅಪಘಾತದಿಂದ ನನ್ನ ಎಡ ಮಂಡಿಗೆ ಮತ್ತು ಮೂಗಿಗೆ ಪೆಟ್ಟಾಗಿರುತ್ತದೆ. ನನ್ನನ್ನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

ಆ ಬಸ್ಸಿನಲ್ಲಿ ಸುಮಾರು 20 ಜನರಿಗೆ ಪೆಟ್ಟಾಗಿತ್ತು. ಆ ಬಸ್ಸಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆತ ಈ ದಿನ ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿತನಾಗಿರುತ್ತಾನೆ.

ಆ ಕಾರಿನಲ್ಲಿದ್ದ ಬಹಳಷ್ಟು ಜನರು ಮರಣ ಹೊಂದಿರುತ್ತಾರೆ. ಆ ಕಾರು ಸಂಪೂರ್ಣವಾಗಿ ಜಖಿ: ಆಗಿತ್ತು.

**ಪಾಟೀ ಸವಾಲುಃ ಶ್ರೀ ಕೆ.ಕೆ.ಎನ್. ವಕೀಲರಿಂದ ಆರೋಪಿತನ ಪರ**

ನಾನು ನಮ್ಮ ಊರಿನಿಂದ ಕಾಲೇಜಿಗೆ ಮತ್ತು ಕಾಲೇಜಿನಿಂದ ಊರಿಗೆ ಈ ಮೇಲೆ ಹೇಳಿದ ಬಸ್‌ನಲ್ಲಿ ಪ್ರಯಾಣವನ್ನು ಸಾಮಾನ್ಯವಾಗಿ ಮಾಡುತ್ತಿದ್ದೇನೆ. ಅಪಘಾತದ ದಿನ ಆ ಬಸ್‌ನ ಹಿಂಬಾಗದಲ್ಲಿ ನಾನು ಕುಳಿತಿದ್ದೆ. ಹಾಗಾಗಿ, ಆ ಬಸ್‌ನ ಮುಂದೆ ನಮಗೆ ಕಾಣುತ್ತಿರಲಿಲ್ಲ ಎಂದರೆ ಸರಿ. ನನಗೆ ಅಪಘಾತದ ಬಗ್ಗೆ ಡಿಕ್ಕಿಯ ಶಬ್ದ ಕೇಳಿದ್ದರಿಂದ ಗೊತ್ತಾಗಿದ್ದು, ಅದು ಹೇಗೆ ಆಯಿತು ಎಂದು ನಾನು ನೋಡಿಲ್ಲ.

ನಾನು ಬಸ್ಸಿನಿಂದ ಕೆಳಗೆ ಇಳಿದಾಗ ಅಪಘಾತ ಹೇಗೆ ಆಯಿತು ಎಂದು ಗೊತ್ತಾಯಿತು. ಅಪಘಾತಕ್ಕೆ ಕಾರಿನ ಚಾಲಕನ ತಪ್ಪು ಕಾರಣವಾಗಿದೆ ಎಂದರೆ ಅವರ ಮತ್ತು ಬಸ್ಸಿನ ಚಾಲಕನ ತಪ್ಪು ಕಾರಣವಾಗಿದೆ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**